ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ದೇವರಾಜ ಮೊಹಲ್ಲಾದಲ್ಲಿರುವ ಜೋರಂಣನ ಮಗ ಜವರಯ್ಯನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರು 3(12.

ಹುಕ್ಕುಂ.

ಮೇಲ್ಕಂಡ ಜವರಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ಜವರಯ್ಯನು ಖುದ್ದು ಹಾಜರು ಇವನನ್ನ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1 ಮೈಸೂರು ಬ್ಯಾಂಕ್ ಯೇಜಂಟ್ ಬಾಳಾಜಿರಾವ್ 2 ಧನಾಭಿವೃದ್ಧೀ ಬ್ಯಾಂಕ್.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಜವರಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿವೇಚನೆ ಮಾಡಿರುವದಲ್ಲದೇ ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ಅಕ್ಟೋಬರ್ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಂದ ಕೊಡೋಣಾಗಿದೆ.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಇದಕ್ಕೆ ಯಾವಾಗ ಡಿಕ್ರೀ ಆಯಿತು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ಬ್ಯಾಂಕ್ ಯೇಜಂಟ್ ಬಾಳಾಜಿರಾವ್	30 0 0	..	ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫಾರೆಸ್ಟ್ ಇಲಾಖೆ.

ತಾರೀಖು 13ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 1889ನೇ ಇಸವಿ ಮಾರ್ಚೀ ಆಖೈರ್‌ವರಿಗೆ ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ತಾಲ್ಲೂಕು ಬಾಬತು ಈ ಕೆಳಗೆ ನಮೂದಾಗುವ ಜಂಗಲ್‌ಗಳಿಂದ ಹುಣಸೂರ್ ಡಿಪೋಕ್ಕೆ ಚಿಲ್ಲರೇ ಚೌಬೀನೇ ಮತ್ತು ಗಳೂ ಸಹ ಹೇರಲು ಇಷ್ಟವುಳ್ಳವರು 1887ನೇ ಇಸವಿ ನವಂಬರ್ 15ನೇ ತಾರೀಖುವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟ್ ಸಾಹೇಬರವರ ಆಫೀಸಿಗೆ ದರಖಾಸ್ತು ಮಾಡಬಹುದು.

ದರಖಾಸ್ತುದಾರ ತಾನು ಗಾಡೀ ಬೋಜಾ 1ಕ್ಕೆ ಯಾವ ದರದಂತೆ ಚಿಲ್ಲರೇ ಚೌಬೀನಾ ಮತ್ತು ಬಿದರುಗಳು ಹೇರಲು ಒಪ್ಪುತ್ತಾನೋ ಆ ದರವನ್ನ ದರಖಾಸ್ತಿನಲ್ಲಿ ನಮೂದಿಸಬೇಕು.

1 ವೀರನ ಹೊಸಹಳ್ಳಿ ಜಂಗಲ್
2 ಕಬಕೂನಹಳ್ಳಿ ಡಿಟೋ
3 ಆನೆಚವಕೂರು ಡಿಟೋ
4 ಬೂಕಾರೇ ಜಂಗಲ್
5 ಮಾವಕಲ್ ಡಿಟೋ

ಟಿ. ಆನಂದರಾವ್,
ಡೆಪ್ಯೂಟಿ ಕಮ್ಮಿಷನರ್.